

ಕಠೋರವಾಗಿದ್ದ ಮನಸ್ಸು ಮೃದುವಾಗತೊಡಗಿತು.

‘ನಾಳೆ ಕೃಷ್ಣಯ್ಯಂಗಾರಿದು ಮದುವೆ’ ಎಂದು ರಂಗನಾಥ ಹೇಳಿದಾಗ ಅವಳೆದೆ ಮೊದಲ ಬಾರಿ ಕಂಪಿಸಿತು.

‘ರಾಧಾನ ಮದುವೆಯಾಗು, ಅವಳಿಗೆ ಒಂದು ಜೀವನ ಕೊಡು ಅಂತ ಕೃಷ್ಣಯ್ಯಂಗಾರಿಗೆ ಹೇಳಿದೆ. ಆದರೆ ಅವನು ಒಪ್ಪಲಿಲ್ಲ. ಅವನ ತಂದೆತಾಯಿಗೆ ವಿಷಯ ತಿಳಿಸಿದೆ. ಅದಕ್ಕೆ ಅವರು ಮೊದಲೇ ಇದನ್ನೆಲ್ಲ ಹೇಳಬಾರದಿತ್ತೆ. ಏನಾದ್ರು ಮಾಡಬಹುದಿತ್ತು. ಈಗ ಮದುವೆ ಇಟ್ಟುಕೊಂಡು ನಾವೇನು ಮಾಡೋಕ್ಕಾಗುತ್ತೆ ಅಂತ ನೊಂದುಕೊಂಡ್ರು’ ಎಂದು ಹೇಳಿದ.

‘ರಂಗನಾಥ ನಡಿ, ಅವರ ಮನೆಗೆ ಹೋಗೋಣ. ನನಗೆ ಅವರು ಬೇಕು’ ಎಂದವಳೇ ಮಗು ಎತ್ತಿಕೊಂಡು ಗಂಡು ಮಗುವಿನೊಂದಿಗೆ ರಾಧಾ ಆಟೋ ಹತ್ತಿದಳು. ಕೃಷ್ಣಯ್ಯಂಗಾರಿಯ ಮನೆಯ ಬಳಿ ಬಂದಾಗ ಮಂಗಳ ವಾದ್ಯದ ಸದ್ದು ಕೇಳಿ ಬರುತಿತ್ತು. ಮನೆ ಮುಂಭಾಗದ ಗೇಟಿನಲ್ಲಿ ಮಕ್ಕಳೊಂದಿಗೆ ಕುಳಿತಳು. ರಂಗನಾಥ ಮನೆ ಒಳಗಡೆ ಹೋಗಿ ವಿಷಯ ತಿಳಿಸಿದ.

ಗಾಬರಿ ಬಿದ್ದು ಬಂದ ಕೃಷ್ಣಯ್ಯಂಗಾರಿಯ ತಂದೆ ತಾಯಿ ರಾಧಾಳಿಗೆ ಕೈ ಮುಗಿದು ‘ನೋಡಮ್ಮ ನಿನ್ನ ಮತ್ತು ನಮ್ಮ ಮಗನ ವಿಷಯವೆಲ್ಲ ರಂಗನಾಥ ಹೇಳಿದ್ದಾನೆ. ನಿನಗೆ ಅನ್ಯಾಯವಾಗಿದೆ ಎಂಬುದು ನಮಗೆ ಗೊತ್ತು. ಹಾಗಂತ ನಾಳೆ ನಮ್ಮ ಮನೆಗೆ ಸೊಸೆಯಾಗಿ ಬರುವವಳಿಗೆ ಅನ್ಯಾಯ ಮಾಡೋಕ್ಕಾಗುತ್ತಾ? ಈಗ ಬಂದು ನನ್ನ ಮಗಬೇಕು ಅಂದ್ರೆ ಅದು ಸಾಧ್ಯವೇನಮ್ಮ. ಇದು ನಮ್ಮ ಕುಟುಂಬದ ಮರ್ಯಾದೆ ಪ್ರಶ್ನೆ. ಕೃಷ್ಣಯ್ಯಂಗಾರಿ ಈಗ ನಿನ್ನ ಬಲವಂತಕ್ಕೆ ಒಪ್ಕೊಂಡ್ರು ನೀವಿಬ್ರು ಸುಖವಾಗಿರ್ತೀರಿ ಅನ್ನೋ ನಂಬಿಕೆ ನಮಗಿಲ್ಲ. ಒಂದು ವೇಳೆ ಅವನಿಗೆ ನಿನ್ನ ಮೇಲೆ ಕಿಂಚಿತ್ತು ಪ್ರೀತಿ ಇದ್ದಿದ್ರೆ ಈ ಮದುವೆನೇ ಬೇಡ ಅಂತಿದ್ದ ಅಲ್ವಾ? ಇದ್ರಲ್ಲಿ ನಿಮ್ಮಿಬ್ಬರದೂ ತಪ್ಪಿದೆ. ಆ ತಪ್ಪಿನಲ್ಲಿ ನಮ್ಮನ್ನ ಪಾಲುದಾರರನ್ನಾಗಿ ಮಾಡಿ ವಯಸ್ಸಾದ ಕಾಲದಲ್ಲಿ ನಾವು ಕೊರಗಿ ಸಾಯೋತರ ಮಾಡ್ಬೇಡ. ನಿನಗೆ ಎಷ್ಟು ದುಡ್ಡು ಬೇಕು ಕೇಳು ಕೊಡ್ತೀವಿ. ಆದ್ರೆ....’ ಅವರಿಗೆ ಮುಂದಕ್ಕೆ ಮಾತನಾಡಲಾಗದೆ ಕಣ್ಣೀರು ಹಾಕತೊಡಗಿದರು.

ಅವರ ಸಂಕಟ ನೋಡಲಾರದೆ ‘ಅವಳ ಜೊತೆ ನಾನು ಮಾತನಾಡುತ್ತೀನಿ, ನೀವು ಬನ್ನಿ’ ಎಂದು ಅವರನ್ನು ರಂಗನಾಥ ಮನೆಯೊಳಗೆ ಕರೆದೊಯ್ದು ‘ಎಲ್ಲವನ್ನು ನಾನು ಸರಿಪಡಿಸುತ್ತೇನೆ. ನೀವು ಸಮಾಧಾನವಾಗಿರಿ’ ಎಂದು ಹೇಳಿದ. ‘ಬದುಕಿನ ಬಗ್ಗೆ ವಿಚಿತ್ರ ನಿರ್ಧಾರ ತಳೆದರೂ ರಾಧಾಳಲ್ಲಿ ಒಂದು ಶಿಸ್ತು, ಸಂಯಮ, ನಿಯತ್ತು ಇದೆ. ತನ್ನ ಜೀವನದ ಬಗ್ಗೆ ಒಂದು ಸ್ಪಷ್ಟತೆ ಇದೆ. ಮಗುವಿನೊಂದಿಗೆ ಆರಾಮವಾಗಿ ಖುಷಿಯಿಂದ ಇದ್ದಳು. ಆದರೆ ಈ ಕೃಷ್ಣಯ್ಯಂಗಾರಿನೇ ಲೋಫರ್. ಏನೇ ಆದರೂ ನಾನು ಅವಳಿಗೆ ಆಸರೆಯಾಗುತ್ತೇನೆ. ಅವಳ ಜೊತೆಗೂಡಿ ಹೆಜ್ಜೆ ಹಾಕುತ್ತೇನೆ’ ಎಂದೆಲ್ಲಾ ಅಂದುಕೊಳ್ಳುತ್ತ ರಾಧಾ ಕುಳಿತಿದ್ದ ಜಾಗಕ್ಕೆ ಬಂದಾಗ ಅವಳು ಅಲ್ಲಿರಲಿಲ್ಲ.

ಗಾಬರಿಯಿಂದ ಫೋನ್ ಮಾಡಿದ. ಸ್ವಿಚ್ ಆಫ್ ಆಗಿತ್ತು. ಅತ್ತಿತ್ತ ಹುಡುಕಿದ. ಕಾಣಲಿಲ್ಲ. ಆಟೋ ಹತ್ತಿ ಸೀದಾ ಮನೆ ಬಳಿ ಬಂದು ನೋಡಿದಾಗ ಬಾಗಿಲಿಗೆ ಬೀಗ ಹಾಕಿಯೇ ಇತ್ತು. ‘ಮನನೊಂದು ಮಕ್ಕಳೊಂದಿಗೆ ಆತ್ಮಹತ್ಯೆ ಏನಾದರೂ......’ಎಂದು ಭಯಪಟ್ಟ. ‘ಅವಳು ಧೈರ್ಯವಂತೆ, ಸಾಯುವ ಆಲೋಚನೆ ಮಾಡಳು’ ಎಂದು ಧೈರ್ಯ ತಂದುಕೊಂಡ.

ಆದರೆ ತಾನು ಕುಳಿತಲ್ಲಿಂದ ಮೇಲೆದ್ದು ಜನರ ಓಡಾಟವಿಲ್ಲದ ಜಾಗಕ್ಕೆ ಹೋದ ರಾಧಾ ಮಂಡಿಯೂರಿ ಕುಳಿತು ಮಕ್ಕಳಿಬ್ಬರನ್ನು ತಬ್ಬಿಕೊಂಡು ಅತ್ತಳು. ಆಕಾಶದತ್ತ ಕತ್ತೆತ್ತಿ ನೋಡಿದಾಗ ಶ್ರೀರಾಧಾಕೃಷ್ಣರು ಹಸನ್ಮುಖರಾಗಿ ತನ್ನನ್ನೇ ನೋಡುತ್ತಿರುವಂತೆ ಭಾಸವಾಯಿತು. ಭಕ್ತಿಯಿಂದ ಪರವಶಳಾಗಿ ಕಣ್ಣು ಮುಚ್ಚಿಕೊಂಡಳು. ಹೊರಬಿದ್ದ ಕಣ್ಣೀರ ಹನಿಗಳು ರಾಧಾಕೃಷ್ಣರ ಪಾದಗಳಿಗೆ ಸಮರ್ಪಿತ ಎನ್ನುವಂತೆ ಧಾರಾಕಾರವಾಗಿ ಹರಿದು ಹೋದವು.

●